# ಒಂದೇ ಗೂಡಿನ ಹಕ್ಕಿಗಳು





ಕುಟುಂಬದ ಮುಖ್ಯಸ್ಥೆ ಚೆನ್ನಮ್ಮ ಯಮುನಪ್ಪ ಪೊಚಗುಂಡ್ರು

■ **ಪರಮೇಶ್ವರಯ್ಯ ಸೊಪ್ಪಿಮಠ**

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಚೆನ್ನಮ್ಮರ ಮನೆಯಲ್ಲಿ 25ಕ್ಕೂ ಹೆಚ್ಚು ಮಂದಿ, ಅಂದರೆ ಐದು ಕುಟುಂಬಗಳು ಮತ್ತು ಅವರ ಕುಡಿಗಳು ಒಂದೇ ಸೂರಿನಡಿಯಲ್ಲಿ ವಾಸಿಸುತ್ತಿದ್ದಾರೆ.

ಈ ಕುಟುಂಬದ್ದು ಹಿಂದಿನಿಂದಲೂ ಸಿಹಿ ಖಾದ್ಯ– ಕುರುಕಲು ತಿಂಡಿ ತಯಾರಿಸಿ ಮಾರುವ ವೃತ್ತಿ. ಕೊನೆಯ ಗಂಡು ಮಕ್ಕಳಾದ ಸಣ್ಣಗಂಗಾಧರ ಮತ್ತು ನಾಗರಾಜ ಜೊತೆಗೆ ಮನೆಯ ಎಲ್ಲಾ ಹೆಣ್ಣು ಮಕ್ಕಳು, ಮಕ್ಕಳು ಕೂಡಿಕೊಂಡು ಈ ಕಾಯಕ ನಡೆಸುತ್ತಾ ಬದುಕನ್ನು ಕಟ್ಟಿಕೊಂಡಿದ್ದಾರೆ. ಮೊದಲ ಮಗ ಗಂಗಾಧರ ಅವರು ಖಾಸಗಿ ಎಣ್ಣೆಗಿರಣಿಯಲ್ಲಿ ನೌಕರಿ ಮಾಡಿದರೆ, ಎರಡನೆಯವರಾದ ಕರಿಯಪ್ಪ ಕೈ ಮಗ್ಗದಲ್ಲಿ ಬಟ್ಟೆ ತಯಾರಿಸುತ್ತಾರೆ. ಮೂರನೆಯವರು ಕೊಟ್ರೇಶ ಸೈನಿಕರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಬ್ಯಾಂಕಿನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದಾರೆ. ವಿಭಿನ್ನ ಕೆಲಸದಲ್ಲಿದ್ದರೂ ಅವರ ನಡುವಿನ ಒಗ್ಗಟ್ಟಿಗೆ ಧಕ್ಕೆ ಬಂದಿಲ್ಲ.

‘ಕೂಡು ಕುಟುಂಬದಿಂದ ಯಾವುದೇ ರೀತಿಯ ಸಮಸ್ಯೆಗಳು ಬಂದಿಲ್ಲ. ಬದಲಾಗಿ ಹೆಚ್ಚು ಅನುಕೂಲಗಳಾಗಿವೆ’ ಎನ್ನುತ್ತಾರೆ ಕುಟುಂಬದ ಮುಖ್ಯಸ್ಥೆ ಚೆನ್ನಮ್ಮ ಯಮುನಪ್ಪ ಪೊಚಗುಂಡ್ರು. ಇವರಿಗೆ ಒಬ್ಬ ಮಗಳು ಹಾಗೂ ಐವರು ಗಂಡುಮಕ್ಕಳು. ಗಂಡುಮಕ್ಕಳ 15 ಮೊಮ್ಮಕ್ಕಳು ಚೆನ್ನಮ್ಮನ ಆಶ್ರಯದಲ್ಲಿಯೇ ಬೆಳೆದು ದೊಡ್ಡವರಾಗಿದ್ದಾರೆ.

ಸೊಸೆಯಂದಿರು ಬೇರೆ ಬೇರೆ ಮನೆಗಳಿಂದ ಬಂದಿದ್ದರೂ ಅವರಲ್ಲಿನ ಹೊಂದಾಣಿಕೆ ಮಾದರಿ ಎನ್ನಬಹುದು. ಎಲ್ಲರೂ ಕೂಡಿಕೊಂಡು ಮನೆಕೆಲಸ ಮಾಡುತ್ತಾರೆ. ಅಡುಗೆ ಮಾಡುವಾಗಲೂ ಯಾರಿಗೆ ಯಾವುದು ಚೆನ್ನಾಗಿ ಬರುತ್ತದೆಯೋ ಅವರು ಅದನ್ನು ಮುಂದೆ ನಿಂತು ಮಾಡಿದರೆ, ಉಳಿದವರು ಅದಕ್ಕೆ ಕೈ ಜೋಡಿಸುತ್ತಾರೆ. ‘ನಮ್ಮ ನಡುವೆ ಭಿನ್ನಾಭಿಪ್ರಾಯಗಳು ಸುಳಿದೇ ಇಲ್ಲ’ ಎನ್ನುತ್ತಾರೆ ಹಿರಿಯ ಸೊಸೆಯಂದಿರಾದ ಸುಮಂಗಲ ಮತ್ತು ಲಲಿತಮ್ಮ.

ಬಟ್ಟೆ ಬರೆಗಳನ್ನು ಇಬ್ಬರು– ಮೂವರು ಸೇರಿಕೊಂಡು ಹೋಗಿ ತರುತ್ತಾರೆ. ಎಲ್ಲರಿಗೂ ಸಮಾನವಾದ ಖರೀದಿ ನಡೆಯುತ್ತದೆ. ಉದಾಹರಣೆಗೆ ಒಂದೇ ತರಹದ ಬೇರೆ ಬೇರೆ ಬಣ್ಣದ ಸೀರೆ ಆಯ್ಕೆ ಮಾಡಿ ತರುತ್ತಾರೆ. ಮನೆಯಲ್ಲಿ ಮೊದಲಿಗೆ ಸಣ್ಣವರು ಆಯ್ಕೆ ಮಾಡಿಕೊಂಡ ನಂತರ ದೊಡ್ಡವರು ತೆಗೆದುಕೊಳ್ಳುತ್ತಾರೆ. ‘ಬಂಗಾರ ಖರೀದಿ ಮಾಡುವಾಗಲೂ ಎಲ್ಲರೂ ಒಟ್ಟಾಗಿ ಹೋಗಿ ಸಮಾನ ಬೆಲೆಯಲ್ಲಿ ಅಭಿರುಚಿಗೆ ತಕ್ಕಂತೆ ಖರೀದಿ ಮಾಡುತ್ತೇವೆ’ ಎನ್ನುತ್ತಾರೆ ಕಿರಿಯ ಸೊಸೆಯರಾದ ಪುಷ್ಪಲತಾ ಮತ್ತು ಪ್ರೇಮ. ಖರೀದಿ ಹೆಚ್ಚಿನ ಸಂಖ್ಯೆಯಲ್ಲಿ ಮಾಡುವುದರಿಂದ ಹೋಲ್‌ಸೇಲ್ ದರದಲ್ಲಿ ಸಿಕ್ಕು ಖರ್ಚೂ ಕಡಿಮೆ! ‘ಜಗಳ ನಡೆಯುವುದಿಲ್ಲ. ಒಂದು ಮಾತು ಬಂದರೂ ಯಾರೂ ಅದನ್ನು ಸದಾ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ’ ಎನ್ನುತ್ತಾರೆ ಮತ್ತೋರ್ವ ಸೊಸೆ ಕವಿತಾ.

ಈ ಕುಟುಂಬದಲ್ಲಿ 15ಕ್ಕೂ ಹೆಚ್ಚು ಮಕ್ಕಳಿದ್ದಾರೆ. ಓದುವುದರ ಜೊತೆಗೆ ಬಿಡುವಿನ ವೇಳೆಯಲ್ಲಿ ವ್ಯಾಪಾರಕ್ಕೆ ಕೈ ಜೋಡಿಸುತ್ತಾರೆ. ಕರಿಬಸವರಾಜ ಬಿ.ಎಡ್ ಮುಗಿಸಿದ್ದರೆ, ಸಿದ್ಧರಾಜು ಎಂಜಿನಿಯರಿಂಗ್ ಓದುತ್ತಿದ್ದಾನೆ. ‘ಉಳಿದವರು 1ನೇ ತರಗತಿಯಿಂದ ಪಿ.ಯು.ಸಿ ವರೆಗೆ ವಿವಿಧ ಹಂತದಲ್ಲಿ ಓದುತ್ತಿದ್ದೇವೆ. ಮನೆಯಲ್ಲಿ ಎಲ್ಲರೂ ಓದಿಗೆ ಹೆಚ್ಚು ಸಹಕಾರ ನೀಡುತ್ತಾರೆ’ ಎಂದು ಎಂ.ಬಿ.ಎ. ಮುಗಿಸಿರುವ ಬಸವರಾಜ ಅವರ ಅಭಿಪ್ರಾಯ.

‘ನಮಗೆ ಓದಬೇಕು ಎಂಬ ಆಸೆ ಇತ್ತು. ಮನೆಯಲ್ಲಿ ತುಂಬಾ ಕಷ್ಟ ಇದ್ದಿದ್ದರಿಂದ ಓದಲಾಗಲಿಲ್ಲ. ಈಗ ನಾವೆಲ್ಲಾ ಒಗ್ಗಟ್ಟಾಗಿ ದುಡಿಯುತ್ತಿರುವುದರಿಂದ ಆರ್ಥಿಕವಾಗಿ ಚೆನ್ನಾಗಿರುವುದರಿಂದ ಮಕ್ಕಳಾದರೂ ಓದಲಿ ಎಂಬ ಅಭಿಲಾಷೆ ನಮ್ಮದು’ ಎನ್ನುತ್ತಾರೆ ಹಿರಿಯರು.

ದೊಡ್ಡ ಕುಟುಂಬದಲ್ಲಿ ಕೆಲಸದ ಹೊರೆ ಕಡಿಮೆ. ಚಿಕ್ಕ ಕುಟುಂಬದಲ್ಲಿ ಒಬ್ಬ ಮಹಿಳೆಯೇ ಮನೆಯ ಎಲ್ಲಾ ಕೆಲಸವನ್ನು ಮಾಡಬೇಕು. ನಮ್ಮ ಹಾಗೆ ಕೂಡು ಕುಟುಂಬವಿದ್ದರೆ ಕೆಲಸ ಹಂಚಿಕೊಳ್ಳುವುದು ಸುಲಭ’ ಎಂದು ಹೇಳುವ ಕರಿಯಪ್ಪನವರ ಮಾತು ಸತ್ಯ ಎನಿಸುತ್ತದೆ.

‘ಗಂಡು ಮಕ್ಕಳು ಒಬ್ಬೊಬ್ಬರು ಒಂದೊಂದು ಜವಾಬ್ದಾರಿ ಮತ್ತು ಖರ್ಚನ್ನು ವಹಿಸಿಕೊಳ್ಳುತ್ತೇವೆ. ಒಬ್ಬರು ಕಿರಾಣಿ, ಮತ್ತೊಬ್ಬರು ತರಕಾರಿ, ಮತ್ತೊಬ್ಬರು ದಿನ ನಿತ್ಯದ ಸಾಮಗ್ರಿ ತರುತ್ತಾರೆ. ಟಿ.ವಿ, ಫ್ರಿಜ್ ಖರೀದಿಗಾದರೆ ಎಲ್ಲರೂ ಒಟ್ಟಿಗೆ ಕುಳಿತು ಮಾತನಾಡಿಕೊಂಡು ತಂದ ನಂತರ ಖರ್ಚನ್ನು ಸಮಾನವಾಗಿ ಹಂಚಿಕೊಳ್ಳುತ್ತೇವೆ’ ಎಂದು ಕೊಟ್ರೇಶ್ ಮತ್ತು ನಾಗರಾಜ್ ವಿವರಿಸಿದರು.

ಹಬ್ಬದ ದಿನಗಳಂದು ಇಡೀ ಮನೆಯಲ್ಲಿ ಸಂಭ್ರಮ ತುಂಬಿ ತುಳುಕುತ್ತದೆ. ‘ನಮ್ಮ ಒಗ್ಗಟ್ಟು ಆಗ ಇನ್ನಷ್ಟು ಹೆಚ್ಚುತ್ತದೆ’ ಎನ್ನುವುದು ಎಲ್ಲರ ಅನಿಸಿಕೆ. ●